**ಫ್ಯಾಕ್ಸ್ : 0816-2255761**
**ದೂರವಾಣಿ : 2272280**

# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು - 572 103

## ಪ್ರಾಥಮಿಕ ವಿನ್ಯಾಸ ಅನುಮೋದನೆ

**ವಿಷಯ** : ತುಮಕೂರು ತಾಲ್ಲೂಕು **ಸತ್ಯಮಂಗಲ** ಗ್ರಾಮದ ಸರ್ವೆ ನಂಬರ್ **103/2** ರಲ್ಲಿ **0-24 ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಪ್ರಾಥಮಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ** :
1. ಅರ್ಜಿದಾರರ ಅರ್ಜಿ ದಿನಾಂಕ **03-02-2012 ಮತ್ತು 04-10-2012**
2. ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ **ಎಎಲ್‌ಎನ್(ಟಿಎಂಕೆ)/ಸಿಆರ್/665/2011-12 ದಿನಾಂಕ 13-01-2012**
3. ಪ್ರಾಧಿಕಾರದ ಸಭೆಯ ದಿನಾಂಕ **04-02-2012** ರ ವಿಷಯ ಸಂಖ್ಯೆ **30** ರ ನಿರ್ಣಯ ಮತ್ತು ದಿನಾಂಕ **20-11-2012** ರ ವಿಷಯ ಸಂಖ್ಯೆ **25** ರ ನಿರ್ಣಯ
4. ಪ್ರಾಧಿಕಾರಕ್ಕೆ ಈ ಕೆಳಕಂಡ ಶುಲ್ಕಗಳನ್ನು ರಸೀದಿ ಸಂಖ್ಯೆ **25957 ರೂ.18,96,445** (ಹದಿನೆಂಟು ಲಕ್ಷದ ತ್ತೊಂಭತ್ತಾರು ಸಾವಿರದ ನಾಲ್ಕು ನೂರ ನಲವತ್ತೈದು ರೂಪಾಯಿಗಳು ಮಾತ್ರ) ದಿನಾಂಕ **18-09-2012** ರಂದು ಪಾವತಿಸಿರುತ್ತಾರೆ.
   ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಉದ್ಯಾನವನ ಹಾಗೂ ಸಿ.ಎ.ವಿನಾಯ್ತಿ ಮತ್ತು ಸ್ಲಂಸೆಸ್ ಶುಲ್ಕ ಬಾಬ್ತು ಶುಲ್ಕ
5. ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ/112/ಬೆಂರೂಪ್ರಾ/2005 ದಿನಾಂಕ 26-05-2005
6. ಅರ್ಜಿದಾರರು ಸಲ್ಲಿಸಿರುವ ಮುಚ್ಚಳಿಕೆ ಪತ್ರ ದಿನಾಂಕ **18-12-2012**

* * * * *

**ಪ್ರಸ್ತಾವನೆ :-**

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ **ಸತ್ಯಮಂಗಲ** ಗ್ರಾಮದ ಸರ್ವೆ ನಂಬರ್ **103/2** ರಲ್ಲಿ **0-24 ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಉಲ್ಲೇಖ (1) ರಂತೆ ಪ್ರಾಥಮಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿರುತ್ತಾರೆ. ಉಲ್ಲೇಖ (2) ರಂತೆ ಮಾನ್ಯ ಜಿಲ್ಲಾಧಿಕಾರಿಗಳು ಭೂ ಪರಿವರ್ತನಾ ಆದೇಶವನ್ನು ಹೊರಡಿಸಿರುತ್ತಾರೆ. ಉಲ್ಲೇಖ (3) ರ ಪ್ರಾಧಿಕಾರದ ಸಭೆಯ ನಿರ್ಣಯದನ್ವಯ ಉಲ್ಲೇಖ (4) ರಂತೆ ಅಗತ್ಯ ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ (5) ರ ಸರ್ಕಾರದ ಸುತ್ತೋಲೆಯಂತೆ ಪ್ರಾಥಮಿಕ ಹಂತದಲ್ಲಿ ವಿನ್ಯಾಸದ ನಿವೇಶನಗಳಲ್ಲಿ ಶೇಕಡ **60** ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಉಲ್ಲೇಖ (6) ರಂತೆ ಸದರಿ ವಿನ್ಯಾಸದಲ್ಲಿನ ನಿವೇಶನಗಳ ಪೈಕಿ ಶೇಕಡ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ ಅರ್ಜಿದಾರರು ಮುಚ್ಚಳಿಕೆ ಪತ್ರವನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರಂತೆ ಅನುಮೋದಿಸಬಹುದಾಗಿರುತ್ತದೆ. ಆದುದರಿಂದ ಕೆಳಕಂಡಂತೆ ಆದೇಶಿಸಿದೆ.

ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/339/2011-12/2313

ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ
ದಿನಾಂಕ 19-12-2012

## ಆದೇಶ

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ತುಮಕೂರು ನಗರದ **ಸತ್ಯಮಂಗಲ** ಗ್ರಾಮದ ಸರ್ವೆ ನಂಬರ್ **103/2** ರಲ್ಲಿ **0-24 ಗುಂಟೆ** ವಿಸ್ತೀರ್ಣದ ಜಮೀನಿಗೆ ವಾಸದ ಉಪಯೋಗಕ್ಕೆ ಪ್ರಾಥಮಿಕ ವಿನ್ಯಾಸ ನಕ್ಷೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) ರನ್ವಯ ಹಾಗೂ ಕರ್ನಾಟಕ

ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರ ನಿಯಮದಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾಥಮಿಕ ವಿನ್ಯಾಸವನ್ನು ಅನುಮೋದಿಸಿದೆ ಹಾಗೂ ವಿನ್ಯಾಸದ ಶೇಕಡ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ.
2. ಅನುಮೋದಿತ ರೂಪರೇಖಾ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿದ ನಂತರ ಈ ಪ್ರಾಧಿಕಾರದ ಪರಿಶೀಲನೆಗಾಗಿ ತಿಳಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯತಕ್ಕದ್ದು.
3. ರಸ್ತೆಗಳ ನಿರ್ಮಾಣ, ಚರಂಡಿ ನಿರ್ಮಾಣ ಮತ್ತು ಡಾಂಬರೀಕರಣ ಕಾಮಗಾರಿಯನ್ನು ಪ್ರಾಧಿಕಾರದ ಕಾಮಗಾರಿ ಶಾಖೆಯಿಂದ ತಯಾರಿಸಲಾದ ಅಂದಾಜು ಪಟ್ಟಿಯಂತೆ ಅವರ ಉಸ್ತುವಾರಿಯಲ್ಲಿ ಅಭಿವೃದ್ಧಿಪಡಿಸತಕ್ಕದ್ದು. ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ / ಮೀಸಲಿರಿಸಿರುವ ಜಾಗವನ್ನು ತೋಟಗಾರಿಕಾ ಇಲಾಖೆಯ ಸಹಕಾರ ಮತ್ತು ಮಾರ್ಗದರ್ಶನದಂತೆ ಈ ಆದೇಶ ನೀಡಿದ ಒಂದು ವರ್ಷದ ಕಾಲಾವಧಿಯಲ್ಲಿ ನಿರ್ವಹಿಸಿ ಪೂರ್ಣಗೊಳಿಸಿ, ಈ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
4. ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 18 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ಈ ಅನುಮೋದನೆಯನ್ನು ಯಾವ ಸೂಚನೆಯನ್ನು ನೀಡದೇ ರದ್ದುಪಡಿಸಲಾಗುವುದು.
5. ಮೂಲಭೂತ ಸೌಕರ್ಯಗಳನ್ನು ನಿಗಧಿಪಡಿಸಿದ ಕಾಲಾವಧಿಯಲ್ಲಿ ಅಭಿವೃದ್ಧಿಪಡಿಸದೇ ಇದ್ದಲ್ಲಿ ಉಲ್ಲೇಖ (4) ರಲ್ಲಿ ನೀವು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರದಂತೆ ಪ್ರಾಧಿಕಾರದ ಸುಪರ್ದಿಗೆ ನೀಡಿರುವ ನಿವೇಶನಗಳು ಅಂದರೆ ನಿವೇಶನ ಸಂಖ್ಯೆ 1M, 5M, 6M, 10M, 11M, 14M ಮತ್ತು 17M ಒಟ್ಟು **07** ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದಲೇ ವಿಲೇವಾರಿ ಮಾಡಿ, ಬಾಕಿ ಉಳಿದ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಲಾಗುವುದು.
6. ಉಲ್ಲೇಖ (4) ರ ಮುಚ್ಚಳಿಕೆ ಪತ್ರದಂತೆ ಪ್ರಾಧಿಕಾರದ ವಶಕ್ಕೆ ನೀಡಿರುವ ನಿವೇಶನಗಳು ಸಂಖ್ಯೆ 1M, 5M, 6M, 10M, 11M, 14M ಮತ್ತು 17M ಒಟ್ಟು **07** ನಿವೇಶನಗಳನ್ನು ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಯಾವುದೇ ಕಾರಣಕ್ಕೂ ಪರಭಾರೆ ಮಾಡುವುದಾಗಲೀ ಮತ್ತು ತಾತ್ಕಾಲಿಕ ಹಕ್ಕು ನೀಡುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ಸ್ವಾಧೀನ ನೀಡುವಂತಿಲ್ಲ.
7. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಿನಾಂಕ 21-11-2005 ರ ಪತ್ರ ಸಂಖ್ಯೆ 217/KSPCB/RO-BNG(S-II)CFE/-2005-2006/5361 ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.
8. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿನ ನಿವೇಶನಗಳು ಸಂಖ್ಯೆ ಮತ್ತು ಅಳತೆಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹೊಸ ಸಸ್ಯಗಳನ್ನು ಬೆಳೆಸುವುದು.
9. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್‌ಜಲ ವೃದ್ದಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

10. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು

11. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ವಿನ್ಯಾಸ ಮಂಜೂರಾತಿಯ ಆದೇಶ ಕೂಡಲೇ ರದ್ದಾಗುವುದು. ಮಾರಾಟಕ್ಕೆ ಬಿಡುಗಡೆ ಮಾಡಲಾದ ಈ ಅನುಮತಿ ಯಾವುದೇ ಪೂರ್ವ ಮಾಹಿತಿ ನೀಡದೇ ರದ್ದುಪಡಿಸುವ ಹಾಗೂ ಕಾನೂನು ಕ್ರಮ ಜರುಗಿಸುವ ಹಕ್ಕನ್ನು ಪ್ರಾಧಿಕಾರಕ್ಕೆ ದತ್ತವಾಗಿರುತ್ತದೆ.

12. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕ ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

13. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.

14. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

15. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೆ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮಕ್ಕೆಗೊಳ್ಳಲಾಗುವುದು.

16. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

17. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot Path) ನಿರ್ಮಿಸುವುದು.

18. ಈ ವಿನ್ಯಾಸದಂತೆ ಬಿಡುಗಡೆಗೊಳಿಸಿರುವ ಶೇಕಡ 60 ರಷ್ಟು ನಿವೇಶನಗಳು ಅಂದರೆ ಸಂಖ್ಯೆ 2M, 3M, 4M, 7M, 8M, 9M, 12M, 13M, 15M ಮತ್ತು 16M ಒಟ್ಟು **10** ನಿವೇಶನಗಳನ್ನು ಮಾರಾಟ ಮಾಡಿ ಹಣ ಕ್ರೂಢೀಕರಿಸಿ, ಬಡಾವಣೆ ಅಭಿವೃದ್ಧಿ ಪಡಿಸಲು ಮಾತ್ರ ಅನುಮತಿ ನೀಡಿದೆ.

19. ಅರ್ಜಿದಾರರ ಮನವಿಯಂತೆ ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005 ರಲ್ಲಿನ ಮಾರ್ಗಸೂಚಿಯಂತೆ ಈ ಕೆಳಕಂಡ ಕ್ರಮ ಸಂಖ್ಯೆ 19(1) ರಂತೆ ಶೇಕಡ 60 ರಷ್ಟು ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

20. ಸರ್ಕಾರದ ಸುತ್ತೋಲೆಯಂತೆ ನಿಗಧಿತ ಸಮಯದಲ್ಲಿ ವಿನ್ಯಾಸ ಅಭಿವೃದ್ಧಿ ಪೂರ್ಣಗೊಳಿಸಿ, ಅಂತಿಮ ವಿನ್ಯಾಸ ಅನುಮೋದನೆ ಪಡೆಯದಿದ್ದಲ್ಲಿ ಉಳಿದ ಶೇಕಡ 40 ರಷ್ಟು ನಿವೇಶನಗಳನ್ನು ಪ್ರಾಧಿಕಾರವು ಮಾರಾಟ ಮಾಡಿ ಉಳಿದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮಕ್ಕೆಗೊಳ್ಳಲಾಗುವುದು.

21. ಹಾಲಿ ಒಳಚರಂಡಿ ವ್ಯವಸ್ಥೆ ಇದ್ದರೆ ಅದಕ್ಕೆ ಸಂಪರ್ಕ ಕಲ್ಪಿಸುವುದು. ಇಲ್ಲದಿದ್ದ ಪಕ್ಷದಲ್ಲಿ ಒಳಚರಂಡಿ ವ್ಯವಸ್ಥೆಯ ಸೆಪ್ಟಿಕ್ ಟ್ಯಾಂಕ್‌ನ್ನು ಪ್ರತ್ಯೇಕ ಜಾಗ ಕಾಯ್ದಿರಿಸಿ, ನಿರ್ಮಿಸಿ ಸಂಪರ್ಕ ಕಲ್ಪಿಸುವುದು.

22. ವಿನ್ಯಾಸದಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿಗಳನ್ನು ನಿರ್ಮಿಸುವುದು.

23. ಅಂತಿಮ ವಿನ್ಯಾಸ ಅನುಮೋದನೆ ಪೂರ್ವದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ವಿದ್ಯುತ್‌ಛಕ್ತಿ ಮಂಡಳಿ ಇವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ವಿನ್ಯಾಸ ಅನುಮೋದನೆ ಪ್ರಸ್ತಾವನೆಯೊಂದಿಗೆ ಸಲ್ಲಿಸತಕ್ಕದ್ದು.

19-1. ಬಿಡುಗಡೆ ಮಾಡಿರುವ ನಿವೇಶನಗಳ ವಿವರಗಳು

| ಕ್ರ.ಸಂ. | ವಿಸ್ತೀರ್ಣ | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1. | 09.14X12.20 | 2M, 3M, 4M, 7M, 8M, 9M, 12M, 13M, 15M, 16M | 10 |
| | | ಒಟ್ಟು | 10 |

19-2. ಬಿಡುಗಡೆ ಮಾಡದಿರುವ ನಿವೇಶನಗಳ ವಿವರಗಳು

| ಕ್ರ.ಸಂ. | ವಿಸ್ತೀರ್ಣ | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1. | 09.14X12.20 | 5M, 6M, 10M, 11M, 14M | 05 |
| 2. | ODD Sites | 1M, 17M | 02 |
| | | ಒಟ್ಟು | 07 |

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಗೆ,
**ಶ್ರೀ ಹನುಮಯ್ಯ**
ಬಿನ್ ಪುಟ್ಟಹನುಮಯ್ಯ
ತೋಟದ ಮನೆ,
ಬೈಲಾಂಜನೇಯ ಸ್ವಾಮಿ ದೇವಸ್ಥಾನದ ಬಳಿ,
ಹನುಮಂತಪುರ,
ತುಮಕೂರು.

**ಪ್ರತಿಯನ್ನು :-**

1. ಪೌರಾಯುಕ್ತರು, ನಗರ ಸಭೆ, ತುಮಕೂರು ತುಮಕೂರು ಇವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ ರವಾನಿಸಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ಇವರಿಗೆ ರವಾನಿಸುತ್ತಾ, ಷರತ್ತು 19(2) ರಲ್ಲಿ ತಿಳಿಸಿರುವ ನಿವೇಶನಗಳನ್ನು ನೊಂದಣಿ ಮಾಡಬಾರದೆಂದು ತಿಳಿಸುತ್ತಾ ವಿನ್ಯಾಸ ನಕ್ಷೆಯೊಂದಿಗೆ ಕಳುಹಿಸಿಕೊಡಲಾಗಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ತುಮಕೂರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
5. ಕಛೇರಿ ಪ್ರತಿ.




KEY PLAN
NOT TO SCALE




## LAND USE ANALYSIS

| | | | % |
|---|---|---|---|
| 1.RESIDENTIAL: | | 1928.50 SMT | 79.00 |
| 2.ROADS | : | 500.50 SMT | 21.00 |
| TOTAL | = | 2429.00 SMT | 100 % |

# GOVERNMENT OF KARNATAKA

TUMKUR URBAN DEVELOPMENT AUTHORITY
TUMKUR

TOWN PLANNING MEMBER
T.U.D.A
TUMKUR

COMMISSIONER
T.U.D.A
TUMKUR

INDEX

| PLOT DETAILS. TOTAL AREA-0 ACRES 24 GUNTAS. | | | | | |
|---|---|---|---|---|---|
| SL.NO | SIZE | RELESED SITE NOS | TOTAL | UN RELESED SITE NOS | TOTAL |
| 1 | 9.14X12.20 | 2M, 3M, 4M, 7M, 8M, 9M, 12M, 13M, 15M, 16M | 10 | 5M, 6M, 10M, 14M, | 4 |
| 2 | ODD | | | 1M, 17M | 2 |
| 3 | 9.14X6.10 | | | 11M, | 1 |
| | TOTAL | | 10 | | 7 |

TITTLE:
APPROVED SINGLE RESIDENTIAL LAYOUT PLAN IN
SY.NO.103/2 AT SATHYAMANGALA, TUMKUR GRAMA
TUMKUR Tq

EXTENTS: 0 Acre 24 Guntas

OWNER:

HANUMAIAH

by Hanumaiah